# ಕರ್ನಾಟಕ ವಿಧಾನ ಪರಿಷತ್ತು
## 143ನೇ ಅಧಿವೇಶನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1456

ಸದಸ್ಯರ ಹೆಸರು : ಶ್ರೀ. ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 17-03-2021

ಉತ್ತರಿಸುವ ಸಚಿವರು : ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ವರ್ಷಾನುಗಟ್ಟಲೆ ಗುತ್ತಿಗೆ ಹಣ ನೀಡದೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ಲೆಕ್ಕಶೀರ್ಷಿಕೆಗಳಡಿ ಗುತ್ತಿಗೆದಾರರಿಗೆ ಪಾವತಿಸಲು ಬಿಲ್ಲುಗಳು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಹಾಗಿದ್ದಲ್ಲಿ, ಕೋಲಾರ ಜಿಲ್ಲೆಯ ಗುತ್ತಿಗೆದಾರರಿಗೆ ವಿವಿಧ ಲೆಕ್ಕ ಶೀರ್ಷಿಕೆಯಡಿ ಬಾಕಿ ಇರುವ ಒಟ್ಟು ಮೊತ್ತವೆಷ್ಟು; (ವಿವರಗಳನ್ನು ನೀಡುವುದು) | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕೋಲಾರ ವಿಭಾಗಕ್ಕೆ ಸಂಬಂಧಿಸಿದಂತೆ ಫೆಬ್ರವರಿ-2021ರ ಅಂತ್ಯಕ್ಕೆ ಒಟ್ಟು ರೂ.10872.24 ಲಕ್ಷ ಮೊತ್ತದ ಬಿಲ್ಲುಗಳು ಪಾವತಿಸಲು ಬಾಕಿ ಇರುತ್ತದೆ. ಲೆಕ್ಕಶೀರ್ಷಿಕೆವಾರು ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ) (ವಿವರ ಕೆಳಗಿನ ಕೋಷ್ಟಕದಲ್ಲಿ) |

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಲೆಕ್ಕಶೀರ್ಷಿಕೆ | ಯೋಜನೆ | ಬಾಕಿಯಿರುವ ಬಿಲ್ಲುಗಳ ಮೊತ್ತ |
|---|---|---|---|
| 1 | 5054-03-337-0-17-154 | ರಾಜ್ಯ ಹೆದ್ದಾರಿ ರಸ್ತೆ-ಸುಧಾರಣೆ | 862.46 |
| 2 | 5054-04-337-0-01-135 | ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) | 7.10 |
| 3 | 5054-04-337-0-01-154 | ಜಿಲ್ಲಾ ಮತ್ತು ಇತರೆ ರಸ್ತೆ-ಸುಧಾರಣೆ | 4269.59 |
| 4 | 5054-04-337-0-02-436 | ನಬಾರ್ಡ್ ಕಾಮಗಾರಿಗಳು | 6.96 |
| 5 | 3054-03-337-0-05-200 | ರಾಜ್ಯ ಹೆದ್ದಾರಿ ರಸ್ತೆ-ನಿರ್ವಹಣೆ | 118.85 |
| 6 | 3054-04-105-0-01-200 | ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳು | 22.12 |
| 7 | 3054-04-337-1-10-200 | ಜಿಲ್ಲಾ ಮತ್ತು ಇತರೆ ರಸ್ತೆ ನಿರ್ವಹಣೆ | 165.26 |
| 8 | 3054-04-337-1-09-172 | ಸಿ.ಎಂ.ಜಿ.ಆರ್.ಎ.ವೈ | 26.91 |
| 9 | 4059-80-051-0-29-386 | ಇಲಾಖಾ ಕಟ್ಟಡಗಳು | 20.65 |
| 10 | 2059-80-053-4-00-200 | ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ/ನಿರ್ವಹಣೆ | 52.63 |
| 11 | 5054-03-337-0-18-154 | ಎಸ್.ಹೆಚ್.ಡಿ.ಪಿ | 5319.71 |
| | | ಒಟ್ಟು | **10872.24** |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಇ | ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡುವಾಗ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು; | ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ: PWD/260/SO/FC/ 2000(P) ದಿ:25-09-2001 ಮತ್ತು ದಿ:30.10.2001 ಹಾಗೂ ಸರ್ಕಾರಿ ಆದೇಶ ಸಂಖ್ಯೆ. FD/03/SOFC/ 2007 ಬೆಂಗಳೂರು, ದಿ:11.12.2007ರಲ್ಲಿನ ಮಾರ್ಗಸೂಚಿಗಳನ್ವಯ ಜೇಷ್ಠತೆ ಹಾಗೂ ಆಧ್ಯತೆಯನ್ನಾಧರಿಸಿ ಬಾಕಿಬಿಲ್ಲುಗಳ ತೀರುವಳಿಗೆ ಕ್ರಮವಹಿಸಲಾಗುತ್ತಿದೆ. |
| ಈ | ಇತ್ತೀಚೆಗೆ ಹಣ ಬಿಡುಗಡೆ ಮಾಡುವಾಗ | |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | ಸರ್ಕಾರದ ಮಾನದಂಡದ ಪ್ರಕಾರ ಬಾಕಿ ಮೊಬಲಗನ್ನು ಪಾವತಿಸಲಾಗುತ್ತಿದೆಯೇ; | |
| ಉ | ಹಾಗಾಗದಿದ್ದಲ್ಲಿ, ಇದಕ್ಕೆ ಕಾರಣಗಳೇನು; | ಅನ್ವಯಿಸುವುದಿಲ್ಲ. |
| ಊ | ಮುಂದಿನ ದಿನಗಳಲ್ಲಿ ಸರ್ಕಾರ ಮಾನದಂಡಗಳ ಪ್ರಕಾರ ಬಾಕಿ ಮೊತ್ತ ಪಾವತಿಸಲು ಕ್ರಮ ಕೈಗೊಳ್ಳಲಾಗುವುದೇ; | ಬಾಕಿ ಬಿಲ್ಲುಗಳನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ: PWD/260/SO/FC/ 2000(P) ದಿ:25-09-2001 ಮತ್ತು ದಿ:30.10.2001 ಹಾಗೂ ಸರ್ಕಾರಿ ಆದೇಶ ಸಂಖ್ಯೆ. FD/03/SOFC/ 2007 ಬೆಂಗಳೂರು, ದಿ:11.12.2007ರಲ್ಲಿನ ಮಾರ್ಗಸೂಚಿಗಳನ್ವಯ ಜೇಷ್ಠತೆ ಹಾಗೂ ಆಧ್ಯತೆಯನ್ನಾಧರಿಸಿ ತೀರುವಳಿಗೆ ಕ್ರಮವಹಿಸಲಾಗುತ್ತಿದೆ. |
| ಋ | ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗಾಗಿ ಗುತ್ತಿಗೆದಾರರಿಗೆ ಬಾಕಿ ಮೊತ್ತವನ್ನು ಪಾವತಿಸಲಾಗುವುದು? (ವಿವರಗಳನ್ನು ನೀಡುವುದು) | ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ, ಬಾಕಿಯಿರುವ ಬಿಲ್ಲುಗಳನ್ನು ಶೀಘ್ರವಾಗಿ ತೀರುವಳಿ ಮಾಡಲು ಕ್ರಮವಹಿಸಲಾಗುವುದು. |

**ಲೋಇ/292/ಐಎಫ್/2020**

**(ಗೋವಿಂದ ಎಂ. ಕಾರಜೋಳ)**
**ಮಾನ್ಯ ಉಪಮುಖ್ಯಮಂತ್ರಿಗಳು**
**ಹಾಗೂ ಲೋಕೋಪಯೋಗಿ ಸಚಿವರು**